# ಕರ್ನಾಟಕ ಸರ್ಕಾರದ ನಡವಳಿಗಳು.

ವಿಷಯ: ಶ್ರೀಮತಿ ಸೀತಮ್ಮ ಅಧ್ಯಕ್ಷರು, ಶ್ರೀ ಜಿ.ವೆಂಕರಾಜು ಸದಸ್ಯರು, ಬೀಜಗನಹಳ್ಳಿ ಗ್ರಾಮ ಗ್ರಾಮ ಪಂಚಾಯತಿ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 48(4) ಮತ್ತು 43(ಎ) ರನ್ವಯ ಕ್ರಮ ಜರುಗಿಸುವ ಬಗ್ಗೆ.

**ಓದಲಾಗಿದೆ:**

1) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತಿ, ಮೈಸೂರು ಇವರ ಪತ್ರ ಸಂಖ್ಯೆ:ಡಿಇವಿ.6/28/2017-18, ದಿನಾಂಕ 01.08.2017.
2) ಇದೇ ಸಮಸಂಖ್ಯೆಯ ಕಾರಣ ಕೇಳುವ ನೋಟಿಸ್, ದಿನಾಂಕ 21.08.2017
3) ಶ್ರೀ ಜಿ.ವೆಂಕರಾಜು ಸದಸ್ಯರು, ಬೀಜಗನಹಳ್ಳಿ ಗ್ರಾಮ ಗ್ರಾಮ ಪಂಚಾಯತಿ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ ಇವರ ಲಿಖಿತ ಹೇಳಿಕೆ, ದಿನಾಂಕ 08.09.2017
4) ಶ್ರೀಮತಿ ಸೀತಮ್ಮ ಅಧ್ಯಕ್ಷರು, ಬೀಜಗನಹಳ್ಳಿ ಗ್ರಾಮ ಗ್ರಾಮ ಪಂಚಾಯತಿ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ ಇವರ ಲಿಖಿತ ಹೇಳಿಕೆ, ದಿನಾಂಕ 08.09.2017
5) ಸರ್ಕಾರದ ಸಮಸಂಖ್ಯೆಯ ವಿಚಾರಣಾ ನೋಟೀಸ್, ದಿನಾಂಕ 30.11.2017
6) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಮೈಸೂರು ಇವರ ಪತ್ರ ಸಂಖ್ಯೆ:ಡಿಇವಿ.6/42/2017-18, ದಿನಾಂಕ 18.12.2017.

**ಪ್ರಸ್ತಾವನೆ:**

ಮೇಲೆ ಓದಲಾದ (1) ರಲ್ಲಿ ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಬೀಜಗನಹಳ್ಳಿ ಗ್ರಾಮ ಪಂಚಾಯತಿಯಲ್ಲಿ ಶೇ25%ರ ಬಾಬ್ತು ಹಣವನ್ನು ದುರುಪಯೋಗ ಪಡಿಸಿಕೊಂಡಿರುವವರ ಬಗ್ಗೆ ಗ್ರಾಮ ಪಂಚಾಯತಿ ಅಧ್ಯಕ್ಷರು ಶ್ರೀಮತಿ ಸೀತಮ್ಮ, ಗ್ರಾಮ ಪಂಚಾಯತಿ ಅಧಿಕಾರಿಯಾದ ಶ್ರೀ ಪ್ರವೀಣ್ ಮತ್ತು ಗ್ರಾಮ ಪಂಚಾಯತಿ ಸದಸ್ಯರಾದ ಶ್ರೀ ವೆಂಕಟರಾಜುರವರ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಿ, ಸದಸ್ಯತ್ವವನ್ನು ಅನೂರ್ಜಿತಗೊಳಿಸುವಂತೆ ಕೋರಿ ಶ್ರೀ ಶಿವಶೇಖರ್ ಬಿನ್ ಜವರಯ್ಯ ಸೋನಹಳ್ಳಿ ಗ್ರಾಮ, ಹುಣಸೂರು ತಾಲ್ಲೂಕು ರವರು ದೂರು ಸಲ್ಲಿಸಿದ್ದು, ಈ ಬಗ್ಗೆ ಮುಖ್ಯ ಯೋಜನಾಧಿಕಾರಿ, ಜಿಲ್ಲಾ ಪಂಚಾಯತ್ ಮೈಸೂರು ರವರು ಮೈಸೂರು ಜಿಲ್ಲೆ, ಹುಣಸೂರು ತಾಲ್ಲೂಕು, ಬೀಜಗನಹಳ್ಳಿ ಗ್ರಾಮ ಪಂಚಾಯತಿಗೆ ಖುದ್ದು ಬೇಟಿ ನೀಡಿ ವರದಿ ನೀಡಿದ್ದು; ಸದರಿ ವರದಿಯಲ್ಲಿ, ಬೀಜಗನಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಗೆ ಬರುವ ಸಿದ್ದನಕೊಪ್ಪಲು ಗ್ರಾಮದ ಶ್ರೀ ರಾಮು ಬಿನ್ ವೆಂಕಟೇಶ ಇವರು ವೈದ್ಯಕೀಯ ವೆಚ್ಚಕ್ಕಾಗಿ ಸಹಾಯಧನ ನೀಡುವಂತೆ ಕೋರಿ ಗ್ರಾಮ ಪಂಚಾಯತಿಗೆ ಮನವಿ ಸಲ್ಲಿಸಿರುತ್ತಾರೆ. ಶೇ25%ರ ಅನುದಾನದಲ್ಲಿ ಕ್ರಿಯಾ ಯೋಜನೆ ತಯಾರಿಸಿ ಅನುಮೋದನೆ ಪಡೆಯದೆ, ಗ್ರಾಮ ಪಂಚಾಯತಿಯಲ್ಲಿ ಯಾವುದೇ ನಿರ್ಣಯ ಕೈಗೊಳ್ಳದೆ ರೂ 5000/- ಗಳ ಸಹಾಯಧನವನ್ನು ನೀಡಲು ಡಿ.ಸಿ ಬಿಲ್‌ನಲ್ಲಿ ಬಿಲ್ ತಯಾರಿಸಿ ರಾಮು/ವೆಂಕಟೇಶ್ ಹೆಸರಿಗೆ ಧನಾದೇಶ ಸಂಖ್ಯೆ 352785, ದಿನಾಂಕ 02.06.2017 ರಂದು ವಿತರಿಸಲಾಗಿದೆ. ಈ ಧನಾದೇಶವನ್ನು ಗ್ರಾಮ ಪಂಚಾಯತಿ ಸದಸ್ಯರಾದ ಶ್ರೀ ವೆಂಕಟರಾಜುರವರು ಡ್ರಾ ಮಾಡಿರುತ್ತಾರೆಂದು ತನಿಖಾ ವರದಿಯಲ್ಲಿ ತಿಳಿಸಲಾಗಿದೆ.

ಹುಣಸೂರು ತಾಲ್ಲೂಕು, ಬೀಜಗನಹಳ್ಳಿ ಗ್ರಾಮ ಪಂಚಾಯತಿ ಸದಸ್ಯರಾದ ಶ್ರೀ ವೆಂಕಟರಾಜುರವರು ಗ್ರಾಮ ಪಂಚಾಯತಿಯ ಶೇ25%ರ ಅನುದಾನವನ್ನು ದುರುಪಯೋಗಪಡಿಸಿಕೊಂಡಿರುವುದರಿಂದ ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ 1993 ರ ಪ್ರಕರಣ 12(ಎಲ್) ರಡಿ ಕ್ರಮ ಕೈಗೊಳ್ಳುವಂತೆ ಮು.ಕಾ.ನಿ, ಜಿ.ಪಂ, ಮೈಸೂರು ಜಿಲ್ಲೆ ರವರು ಪ್ರಸ್ತಾವನೆ ಸಲ್ಲಿಸಿರುತ್ತಾರೆ ಹಾಗೂ ಶೇ.25 ರ ಅನುದಾನದಲ್ಲಿ ಕ್ರಿಯಾ ಯೋಜನೆ ಅನುಮೋದನೆ ಆಗದೇ ರೂ.5,000/-ಗಳ ಸಹಾಯಧನವನ್ನು ನೇರವಾಗಿ ಫಲಾನುಭವಿಗಳಿಗೆ ವಿತರಿಸದೆ ಗ್ರಾಮ ಪಂಚಾಯತಿ ಸದಸ್ಯರಿಗೆ ನೀಡಿ ಹಣ ದುರುಪಯೋಗವಾಗಲು ಕಾರಣರಾದ ಗ್ರಾಮ ಪಂಚಾಯತಿ ಅಧ್ಯಕ್ಷರಾದ ಶ್ರೀಮತಿ ಸೀತಮ್ಮ ರವರ ವಿರುದ್ಧ ಕ್ರಮ ಕೈಗೊಳ್ಳಲು ಸರ್ಕಾರವನ್ನು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಿ, ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಅಧಿನಿಯಮ, 1993 ರ ಪ್ರಕರಣ 48(4) ಮತ್ತು 43ಎ ರನ್ವಯ ಗ್ರಾಮ ಪಂಚಾಯತಿ ಅಧ್ಯಕ್ಷ ಹಾಗೂ ಸದಸ್ಯ ಸ್ಥಾನದಿಂದ ಏಕೆ ವಜಾ ಮಾಡಬಾರದು ಎಂಬುದರ ಬಗ್ಗೆ 15 ದಿನಗಳೊಳಗಾಗಿ ವಿವರಣೆ ನೀಡುವಂತೆ ಮೇಲೆ ಓದಲಾದ ಕ್ರಮ ಸಂಖ್ಯೆ: (2) ರಲ್ಲಿ ಶ್ರೀ ಜಿ.ವೆಂಕರಾಜು ಸದಸ್ಯರು, ಬೀಜಗನಹಳ್ಳಿ ಗ್ರಾಮ ಗ್ರಾಮ ಪಂಚಾಯತಿ, ಹುಣಸೂರು

ತಾಲ್ಲೂಕು, ಮೈಸೂರು ಜಿಲ್ಲೆ ಹಾಗೂ ಶ್ರೀಮತಿ ಸೀತಮ್ಮ ಅಧ್ಯಕ್ಷರು, ಬೀಜಗನಹಳ್ಳಿ ಗ್ರಾಮ ಗ್ರಾಮ ಪಂಚಾಯತಿ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ ರವರಿಗೆ ಕಾರಣ ಕೇಳುವ ನೋಟೀಸನ್ನು ಜಾರಿಗೊಳಿಸಲಾಗಿತ್ತು.

ಮೇಲೆ ಓದಲಾದ (3)ರಲ್ಲಿ ಶ್ರೀ ಜಿ.ವೆಂಕರಾಜು ಸದಸ್ಯರು, ಬೀಜಗನಹಳ್ಳಿ ಗ್ರಾಮ ಗ್ರಾಮ ಪಂಚಾಯತಿ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ ಇವರು ಸರ್ಕಾರದಿಂದ ನೀಡಲಾದ ಕಾರಣ ಕೇಳಿ ನೋಟೀಸಿಗೆ ಕೆಳಗಿನಂತೆ ಆಕ್ಷೇಪಣೆಗಳನ್ನು ಸಲ್ಲಿಸಿರುತ್ತಾರೆ.

ಅನಾರೋಗ್ಯದ ಕಾರಣದಿಂದಾಗಿ ವೈದ್ಯಕೀಯ ವೆಚ್ಚ ಭರಿಸಲು ಸಹಾಯಧನಕ್ಕಾಗಿ ಅರ್ಜಿಸಲ್ಲಿಸಿರುತ್ತಾರೆ. ಅರ್ಜಿದಾರರ ಕೋರಿಕೆಯ ಗಂಭೀರತೆಯನ್ನು ಮನಗಂಡು ಮಾನವೀಯತೆ ದೃಷ್ಟಿಯಿಂದ ಅವರಿಗೆ ಸಹಾಯಧನ ಮಂಜೂರು ಮಾಡುವಂತೆ ಒಬ್ಬ ಚುನಾಯಿತ ಪ್ರತಿನಿಧಿಯಾಗಿ ತಿಳಿಸಿರುತ್ತೇನೆ. ಗ್ರಾಮ ಪಂಚಾಯತಿಯಿಂದ ನೀಡಲಾದ ಧನಾದೇಶವನ್ನು ಫಲಾನುಭವಿ ಶ್ರೀ ರಾಮು ರವರು ನಗದೀಕರಣಕ್ಕಾಗಿ ಬ್ಯಾಂಕ್‌ಗೆ ಸಲ್ಲಿಸಿರುತ್ತಾರೆ. ಬ್ಯಾಂಕ್ ಅಧಿಕಾರಿಗಳು ಸದರಿಯವರ ಸಹಿಯನ್ನು ದೃಢೀಕರಿಸುವಂತೆ ತಿಳಿಸಿದ ಮೇರೆಗೆ ಶ್ರೀ ರಾಮು ಅವರ ಸಹಿಯ ಪಕ್ಕದಲ್ಲಿ ನಾನು ಸಹಿ ಹಾಕಿಕೊಟ್ಟಿರುವುದು ವಾಸ್ತವಿಕ ಸಂಗತಿಯಾಗಿದೆ. ಆದರೆ ನಾನೇ ಹಣವನ್ನು ದುರುಪಯೋಗ ಪಡಿಸಿಕೊಂಡಿರುವುದಾಗಿ ತಪ್ಪಾಗಿ ಭಾವಿಸಲಾಗಿದೆ. ನಾನು ಅನುಸೂಚಿತ ಜಾತಿ ಮೀಸಲು ಕ್ಷೇತ್ರದಿಂದ ಆಯ್ಕೆಯಾಗಿ ನನ್ನ ಕಾರ್ಯ ವ್ಯಾಪ್ತಿಯಲ್ಲಿ ದಕ್ಷತೆಯಿಂದಲೂ, ನಿಷ್ಠೆಯಿಂದಲೂ ಸೇವೆ ಸಲ್ಲಿಸಿ ಎಲ್ಲರ ಪ್ರೀತಿ ವಿಶ್ವಾಸಗಳಿಗೆ ಪಾತ್ರನಾಗಲು ಪ್ರಾಮಾಣಿಕ ಪ್ರಯತ್ನ ಪಟ್ಟಿರುತ್ತೇನೆ. ಇದನ್ನು ಸಹಿಸದು ಕೆಲವರು ಕುತಂತ್ರದಿಂದ ದೂರು ಸಲ್ಲಿಸಿರುತ್ತಾರೆ. ಆದ್ದರಿಂದ, ಕರ್ನಾಟಕ ಪಂ.ರಾಜ್ ಅಧಿನಿಯಮದ ಕಲಂ 43(ಎ) ರನ್ವಯ ಉದ್ದೇಶಿತ ಕ್ರಮವನ್ನು ಕೈಬಿಡಬೇಕಾಗಿ ಕೋರಿರುತ್ತಾರೆ.

ಮೇಲೆ ಓದಲಾದ (4)ರಲ್ಲಿ ಶ್ರೀಮತಿ ಸೀತಮ್ಮ ಅಧ್ಯಕ್ಷರು, ಬೀಜಗನಹಳ್ಳಿ ಗ್ರಾಮ ಗ್ರಾಮ ಪಂಚಾಯತಿ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ ರವರು ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿ ಈ ಕೆಳಕಂಡ ಪ್ರಮುಖ ಅಂಶಗಳನ್ನು ತಿಳಿಸಿರುತ್ತಾರೆ.

ಶ್ರೀ ರಾಮು ಬಿನ್ ವೆಂಕಟೇಶ್, ಸದ್ದನಕೊಪ್ಪಲು ಅವರ 22% ಅನುದಾನದಲ್ಲಿ ಅನಾರೋಗ್ಯದ ಕಾರಣದಿಂದಾಗಿ ವೈದ್ಯಕೀಯ ವೆಚ್ಚ ಭರಿಸಲು ಸಹಾಯಧನಕ್ಕಾಗಿ ಅರ್ಜಿಸಲ್ಲಿಸಿರುತ್ತಾರೆ. ಅರ್ಜಿದಾರರ ಕೋರಿಕೆಯ ಗಂಭೀರತೆಯನ್ನು ಮನಗೊಂಡು ಕ್ರಿಯಾಯೋಜನೆ ತಯಾರಿಸಿ ಅನುಮೋದನೆ ಪಡೆಯುವ ಷರತ್ತಿಗೊಳಪಟ್ಟು ಒಬ್ಬ ವ್ಯಕ್ತಿಯ ಜೀವನ ಕಾಪಾಡಲು ಸದುದ್ದೇಶದಿಂದ ಲೆಕ್ಕ ಸಹಾಯಕರು ಹಾಗೂ ಪಂಚಾಯತ ಅಭಿವೃದ್ಧಿ ಅಧಿಕಾರಿಯವರ ಜೊತೆ ಚರ್ಚಿಸಿ ಸೂಕ್ತಕ್ರಮ ಕೈಗೊಳ್ಳುವಂತೆ ತಿಳಿಸಿದೆ. ಪಿಡಿಓ ಹಾಗೂ ಲೆಕ್ಕಸಹಾಯಕರು ಕಛೇರಿಯಲ್ಲಿನ ಎಲ್ಲಾ ವ್ಯವಹಾರಗಳ ಕುರಿತು ಚುನಾಯಿತ ಪ್ರತಿನಿಧಿಗಳಿಗೆ ಮನವರಿಕೆ ಮಾಡಿಕೊಡಬೇಕಾಗಿರುತ್ತದೆ. ಸಹಾಯಧನಕ್ಕೆ ಸಂಬಂಧಿಸಿದಂತೆ ಡಿ.ಸಿ.ಬಿಲ್‌ಗೆ ಸಹಿ ಪಡೆಯಬೇಕಾದದ್ದು ಸಿಬ್ಬಂದಿಗಳ ಕರ್ತವ್ಯವಾಗದ್ದು ಅದನ್ನು ಮನವರಿಕೆ ಮಾಡಿಕೊಳ್ಳದೆ ಮು.ಕಾ.ನಿ ಯವರು ಸಲ್ಲಿಸಿರುವ ವರದಿಯು ಲೋಪದೋಷದಿಂದ ಕೂಡಿರುತ್ತದೆ. ಪಂಚಾಯತ ಅಭಿವೃದ್ಧಿ ಅಧಿಕಾರಿಗಳು ನನಗೆ ತಿಳಿಸಿ ಧನಾದೇಶಕ್ಕೆ ಸಹಿ ಪಡೆಯಬೇಕಾದದ್ದು ಅವರ ಕರ್ತವ್ಯ ಬರವಣಿಗೆ ಗೊತ್ತಿಲ್ಲದ ನನಗೆ ಈ ವಿವರಗಳನ್ನು ತಿಳಿಸಿ ಸಹಿ ಪಡಿಯಬೇಕೆಂಬ ವಿಚಾರ ತಿಳಿದಿದ್ದರೂ ಕೂಡಾ ಇವರು ಮಾಡಿರುವ ಕರ್ತವ್ಯ ಲೋಪಕ್ಕೆ ನನ್ನನ್ನು ಹೊಣೆಗಾರಳನ್ನಾಗಿ ಮಾಡಲು ಬರುವುದಿಲ್ಲ. ಮೀಸಲಾತಿ ಆಧಾರದ ಮೇಲೆ ಅಧ್ಯಕ್ಷೆಯಾಗಿ ಕಾರ್ಯನಿರ್ವಹಿಸುತ್ತಿರುವ ನನ್ನ ಮೇಲೆ ಕಳಂಕ ತರವು ಏಕೈಕ ಕಾರಣಕ್ಕೆ ಗ್ರಾಮ ಪಂಚಾಯತಿ ಸಿಬ್ಬಂದಿಯು ಈ ಲೋಪವನ್ನು ಎಸಗಿ ಅದಕ್ಕೆ ನನ್ನನ್ನು ಬಲಿಪಶು ಮಾಡಲು ಪ್ರಯತ್ನಿಸಿರುವುದು ಸ್ವಾಭಾವಿಕ ನ್ಯಾಯ ತತ್ವಕ್ಕೆ ವಿರುದ್ಧವಾದ ಕ್ರಮವಾಗಿರುತ್ತದೆ. ಕ್ರಿಯಾಯೋಜನೆ ತಯಾರಿಸಿ ಘಟನೋತ್ತರ ಮಂಜೂರಾತಿಯನ್ನು ಪಡೆಯಬೇಕಾದದ್ದು ಅಧಿಕಾರಿಗಳು ಆದ್ಯತೆ ಮೇರೆಗೆ ಕ್ರಮ ಕೈಗೊಳ್ಳಬೇಕಾಗಿರುತ್ತದೆ. ಆದ್ದರಿಂದ ನಾನು ಕರ್ನಾಟಕ ಪಂ.ರಾಜ್ ಅಧಿನಿಯಮದ ಕಲಂ 48(4) ಕ್ಕೆ ಅರ್ಹತೆ ಹೊಂದಿರುವುದಿಲ್ಲವೆಂದು ತಿಳಿಸಿರುತ್ತಾರೆ.

ಮೇಲೆ ಓದಲಾದ (5) ರಲ್ಲಿ ಶ್ರೀ ಜಿ.ವೆಂಕರಾಜು ಸದಸ್ಯರು, ಬೀಜಗನಹಳ್ಳಿ ಗ್ರಾಮ ಗ್ರಾಮ ಪಂಚಾಯತಿ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ ಹಾಗೂ ಶ್ರೀಮತಿ ಸೀತಮ್ಮ ಅಧ್ಯಕ್ಷರು, ಬೀಜಗನಹಳ್ಳಿ ಗ್ರಾಮ ಗ್ರಾಮ ಪಂಚಾಯತಿ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ ಇವರನ್ನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಪ್ರಧಾನ ಕಾರ್ಯದರ್ಶಿ(ಪಂ.ರಾಜ್) ರವರ ನ್ಯಾಯಾಲಯದಲ್ಲಿ ದಿನಾಂಕ 11.12.2017 ರಂದು ಜರುಗಿದ ವಿಚಾರಣೆಯಲ್ಲಿ, ಅಧ್ಯಕ್ಷರು, ಆಪಾದಿತ ಸದಸ್ಯರು, ಬೀಜಗನಹಳ್ಳಿ ಗ್ರಾಮ ಗ್ರಾಮ ಪಂಚಾಯತಿ, ಸಹಾಯಕ ನಿರ್ದೇಶಕರು(ಗ್ರಾ.ಉ) ತಾಲ್ಲೂಕು ಪಂಚಾಯತಿ, ಹುಣಸೂರು, ಹಾಗೂ ಉಪಕಾರ್ಯದರ್ಶಿ ಅಭಿವೃದ್ಧಿ ಜಿಲ್ಲಾ ಪಂಚಾಯತಿ ಮೈಸೂರು ರವರು ಹಾಜರಿದ್ದರು. ಅಧ್ಯಕ್ಷರು ದಾಖಲಾತಿಗಳೊಂದಿಗೆ ತಮ್ಮ ಲಿಖಿತ ಹೇಳಿಕೆಯನ್ನು ಸಲ್ಲಿಸಿರುತ್ತಾರೆ.

ಮೇಲೆ ಓದಲಾದ (6) ರಲ್ಲಿ ಕಾರ್ಯನಿರ್ವಾಹಕ ಅಧಿಕಾರಿ, ತಾಲ್ಲೂಕು ಪಂಚಾಯತ್, ಹುಣಸೂರು ರವರು ದಿನಾಂಕ:15-12-2017 ರಂದು ಸಂಬಂಧಪಟ್ಟವರನ್ನು ಕರೆಯಿಸಿ ವಿಚಾರಣೆ ನಡೆಸಿ, ಶ್ರೀ ರಾಮು ಬಿನ್ ವೆಂಕಟೇಶ್ ರವರು ಹೇಳಿಕೆ ನೀಡಿ ದಿನಾಂಕ:02-06-2017 ರಂದು ತಾನು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡ ಅನುದಾನದಲ್ಲಿ ಅನಾರೋಗ್ಯದ ಕಾರಣದಿಂದಾಗಿ ವೈದ್ಯಕೀಯ ವೆಚ್ಚ ಭರಿಸಲು ಸಹಾಯಧನಕ್ಕಾಗಿ ಅರ್ಜಿಸಲ್ಲಿಸಿದ್ದು, ಅದರಂತೆ ಬೀಜಗನಹಳ್ಳಿ ಗ್ರಾಮ ಗ್ರಾಮ ಪಂಚಾಯತಿ ಪಂಚಾಯತಿ ಅಭಿವೃದ್ಧಿ ಅದಿಕಾರಿಯವರಿಂದ ರೂ.5,000/-ಗಳನ್ನು ಓಪನ್ ಚೆಕ್ ಸಂ:75352785 ಪಡೆದಿರುವುದಾಗಿ ಹಾಗೂ ಅನಾರೋಗ್ಯದ ಕಾರಣ ಆಸ್ಪತ್ರೆಯಲ್ಲಿ ದಾಖಲಾಗಿದ್ದು, ತನ್ನ ಹೆಂಡತಿ ಶ್ರೀಮತಿ ಇಂದ್ರಮಣಿ ರವರು ಚೆಕ್ಕನ್ನು ತಂದು ಚೆಕ್ಕಿನ ಹಿಂಭಾಗ ನನ್ನ ಸಹಿ ಪಡೆದು ಸದಸ್ಯರಾದ ಶ್ರೀ ಜಿ.ವೆಂಕರಾಜು ರವರಿಗೆ ನೀಡಿ ನಗದೀಕರಿಸಿ ಕೊಡುವಂತೆ ಕೋರಿದ್ದರ ಮೇರೆಗೆ ಶ್ರೀ ಜಿ.ವೆಂಕರಾಜುರವರು ವಿಜಯಾಬ್ಯಾಂಕ್ ಗೆ ತೆರಳಿ ರೂ.5,000/-ಚೆಕ್ಕನ್ನು ನಗದೀಕರಿಸಿ ಆಸ್ಪತ್ರೆಯಲ್ಲಿದ್ದ ನನಗೆ ಹಣವನ್ನು ಕೊಟ್ಟಿರುವುದಾಗಿ ವರದಿಯನ್ನು ಸಲ್ಲಿಸಿರುವುದಾಗಿ ತಿಳಿಸಿರುತ್ತಾರೆ. ಶ್ರೀ ಜಿ.ವೆಂಕರಾಜುರವರು ಸಹ ಇದೇ ಸಮಜಾಯಿಷಿಯನ್ನು ಹೇಳಿರುವುದಾಗಿ ತಿಳಿಸಿರುತ್ತಾರೆ. ಗ್ರಾಮ ಪಂಚಾಯತಿ ದಾಖಲಾತಿಗಳನ್ನು ಪರಿಶೀಲಿಸಲಾಗಿ ಸಿದ್ದನಕೊಪ್ಪಲು ಗ್ರಾಮದ ಶ್ರೀ ರಾಮು ಬಿನ್ ವೆಂಕಟೇಶ್ ರವರು ಅನಾರೋಗ್ಯದ ಕಾರಣ ಅನಘ ಆಸ್ಪತ್ರೆಗೆ ಮೈಸೂರು ಇಲ್ಲಿಗೆ ದಾಖಲಾಗಿದ್ದು, ಗ್ರಾಮ ಪಂಚಾಯತಿಯಲ್ಲಿನ ಶೇ.25 ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಅನುದಾನದಲ್ಲಿ ವೈದ್ಯಕೀಯ ವೆಚ್ಚ ಭರಿಸಲು ಅವಕಾಶವಿರುತ್ತದೆ. ಶ್ರೀ ರಾಮು ಬಿನ್ ವೆಂಕಟೇಶ್ ರವರು ಬೀಜಗನಹಳ್ಳಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಸಿದ್ದನಕೊಪ್ಪಲು ಗ್ರಾಮದ ವಾಸಿಯೆಂದು ದಾಖಲೆಗಳು ಲಭ್ಯವಿರುತ್ತದೆ ಎಂದು ತಿಳಿಸಿರುತ್ತಾರೆ.

ಸರ್ಕಾರವು ಮುಖ್ಯ ಕಾರ್ಯನಿರ್ವಾಹಕಾಧಿಕಾರಿ, ಜಿಲ್ಲಾ ಪಂಚಾಯಿತಿ, ಮೈಸೂರು ರವರ ಪ್ರಸ್ತಾವನೆಗಳು, ಲಭ್ಯವಿರುವ ಎಲ್ಲಾ ಸಾಕ್ಷ್ಯಾಧಾರಗಳು, ದಾಖಲಾತಿಗಳು, ಲಿಖಿತ ಹೇಳಿಕೆಗಳು ಹಾಗೂ ಆಪಾದಿತ ಸದಸ್ಯರ ಹೇಳಿಕೆಗಳನ್ನು ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಮೈಸೂರು ಇವರ ವರದಿಯನ್ನು ಪರಿಶೀಲಿಸಿ, ಶ್ರೀಮತಿ ಸೀತಮ್ಮ ಅಧ್ಯಕ್ಷರು, ಮತ್ತು ಶ್ರೀ ಜಿ.ವೆಂಕರಾಜು ಸದಸ್ಯರು, ಬೀಜಗನಹಳ್ಳಿ ಗ್ರಾಮ ಗ್ರಾಮ ಪಂಚಾಯತಿ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ ಇವರು ಮಾನವೀಯತೆ ಉದ್ದೇಶದಿಂದ ಶ್ರೀ ರಾಮು ಬಿನ್ ವೆಂಕಟೇಶ್ ರವರಿಗೆ ಚೆಕ್ ನೀಡಿದ್ದು, ಶ್ರೀ ರಾಮು ಬಿನ್ ವೆಂಕಟೇಶ್ ರವರ ಹೇಳಿಕೆಯನ್ನು ಗಮನಿಸಲಾಗಿ ಶ್ರೀಮತಿ ಸೀತಮ್ಮ ಅಧ್ಯಕ್ಷರು, ಮತ್ತು ಶ್ರೀ ಜಿ.ವೆಂಕರಾಜು ಸದಸ್ಯರು, ಇವರ ಮೇಲಿನ ಆರೋಪಗಳು ಸಾಬೀತಾಗದೆ ಇರುವ ಹಿನ್ನಲೆಯಲ್ಲಿ ಎಚ್ಚರಿಕೆ ನೀಡಿ ಶ್ರೀಮತಿ ಸೀತಮ್ಮ ಅಧ್ಯಕ್ಷರು, ಮತ್ತು ಶ್ರೀ ಜಿ.ವೆಂಕರಾಜು ಸದಸ್ಯರು, ಬೀಜಗನಹಳ್ಳಿ ಗ್ರಾಮ ಗ್ರಾಮ ಪಂಚಾಯತಿ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ ಇವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯಿದೆ 1993 ಪ್ರಕರಣ 48(4) ಮತ್ತು 43(ಎ) ರಡಿ ಜರುಗಿಸಬೇಕಾದ ಕ್ರಮವನ್ನು ಕೈಬಿಟ್ಟು ಪ್ರಕರಣವನ್ನು ಮುಕ್ತಾಯಗೊಳಿಸಲು ನಿರ್ಧರಿಸಿದೆ.

ಅದರಂತೆ ಈ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 974 ಗ್ರಾಪಂಅ 2017 ಬೆಂಗಳೂರು, ದಿನಾಂಕ: 07.03.2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀಮತಿ ಸೀತಮ್ಮ ಅಧ್ಯಕ್ಷರು, ಮತ್ತು ಶ್ರೀ ಜಿ.ವೆಂಕರಾಜು ಸದಸ್ಯರು, ಬೀಜಗನಹಳ್ಳಿ ಗ್ರಾಮ ಗ್ರಾಮ ಪಂಚಾಯತಿ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ ಇವರ ಹೇಳಿಕೆ ಹಾಗೂ ಮೌಖಿಕ ವಿಚಾರಣೆಯ ಹಿನ್ನೆಲೆಯಲ್ಲಿ ಶ್ರೀಮತಿ ಸೀತಮ್ಮ ಅಧ್ಯಕ್ಷರು, ಮತ್ತು ಶ್ರೀ ಜಿ.ವೆಂಕರಾಜು ಸದಸ್ಯರು, ಬೀಜಗನಹಳ್ಳಿ ಗ್ರಾಮ ಗ್ರಾಮ ಪಂಚಾಯತಿ, ಹುಣಸೂರು ತಾಲ್ಲೂಕು, ಮೈಸೂರು

ಜಿಲ್ಲೆ ಇವರಿಗೆ ಎಚ್ಚರಿಕೆಯನ್ನು ನೀಡಿ, ಸದರಿಯವರ ವಿರುದ್ಧ ಕರ್ನಾಟಕ ಗ್ರಾಮ ಸ್ವರಾಜ್ ಮತ್ತು ಪಂಚಾಯತ್ ರಾಜ್ ಕಾಯಿದೆ 1993 ಪ್ರಕರಣ 48(4) ಮತ್ತು 43(ಎ) ರಡಿ ಪ್ರಾರಂಭಿಸಲಾದ ವಿಚಾರಣೆಯನ್ನು ಕೈಬಿಟ್ಟು, ಪ್ರಕರಣವನ್ನು ಮುಕ್ತಾಯಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ<br>
ಮತ್ತು ಅವರ ಹೆಸರಿನಲ್ಲಿ,

(ಮುಬಾರಕ್ ಅಹ್ಮದ್),<br>
ಉಪನಿರ್ದೇಶಕರು ಮತ್ತು ಪದನಿಮಿತ್ತ<br>
ಸರ್ಕಾರದ ಅಧೀನ ಕಾರ್ಯದರ್ಶಿ,<br>
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

ಗೆ:

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತಿ, ಮೈಸೂರು ಜಿಲ್ಲೆ.
2. ಕಾರ್ಯನಿರ್ವಾಹಕಾಧಿಕಾರಿ, ತಾಲ್ಲೂಕು ಪಂಚಾಯತಿ, ...

3. ಶ್ರೀಮತಿ ಸೀತಮ್ಮ ಅಧ್ಯಕ್ಷರು, ಬೀಜಗನಹಳ್ಳಿ ಗ್ರಾಮ ಗ್ರಾಮ ಪಂಚಾಯತಿ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ.
4. ಶ್ರೀ ಜಿ.ವೆಂಕರಾಜು ಸದಸ್ಯರು, ಬೀಜಗನಹಳ್ಳಿ ಗ್ರಾಮ ಗ್ರಾಮ ಪಂಚಾಯತಿ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ.
5. ಪಂಚಾಯಿತಿ ಅಭಿವೃದ್ಧಿ ಅಧಿಕಾರಿ, ಬೀಜಗನಹಳ್ಳಿ ಗ್ರಾಮ ಗ್ರಾಮ ಪಂಚಾಯತಿ, ಹುಣಸೂರು ತಾಲ್ಲೂಕು, ಮೈಸೂರು ಜಿಲ್ಲೆ.
6. ಗಣಕ ಶಾಖೆ/ಕರ್ನಾಟಕ ವಿಕಾಸ
7. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.

<u>ಪ್ರತಿಯನ್ನು ಮಾಹಿತಿಗಾಗಿ:</u>

1) ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ.